ESI.A.No.43/2021

RW-1,

ದಿನಾಂಕಃ 09-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ. NCB ವಕೀಲರಿಂದ

ದಿನಾಂಕಃ9-12-2016 ರಲ್ಲಿ ಮೊದಲ ಬಾರಿಗೆ ನಿಶಾನೆ ಆರ್-2 ಪ್ರಕಾರ ಮಾರ್ಚ 2011 ರಿಂದ ಮೇ 2016 ರವರೆಗೆ ವಂತಿಗೆಯನ್ನು ನೀಡುವಂತೆ ನೋಟೀಸನ್ನು ನೀಡಲಾಗಿರುತ್ತದೆ ಎಂದರೆ ಸರಿ .ದಿನಾಂಕಃ5-9-2018 ರಲ್ಲಿ ಮತ್ತೊಂದು ಬಾರಿಗೆ ನಿಶಾನೆ ಆರ್-4 ಪ್ರಕಾರ ಜೂನ್ 2016 ರಿಂದ ಮಾರ್ಚ 2018 ರವರೆಗೆ ವಂತಿಗೆಯನ್ನು ನೀಡುವಂತೆ ನೋಟೀಸನ್ನು ನೀಡಲಾಗಿರುತ್ತದೆ ಎಂದರೆ ಸರಿ. ದಿನಾಂಕಃ16-2-2017 ರಲ್ಲಿ ಮಾರ್ಚ 2011 ರಿಂದ ಮೇ 2016 ರವರೆಗಿನ ವಂತಿಗೆಯ ಮೇಲೆ ಬಡ್ಡಿಯನ್ನು ನೀಡುವಂತೆ ನಿಶಾನೆ ಆರ್-3 ಪ್ರಕಾರ ನೋಟೀಸನ್ನು ನೀಡಲಾಗಿರುತ್ತದೆ ಎಂದರೆ ಸರಿ. ಮೇಲೆ ಹೇಳಿದಂತ ಎಲ್ಲಾ ನೋಟೀಸುಗಳ ಸುನಾವಣೆಗೆ ಅರ್ಜಿದಾರರು ಹಾಜರಿದ್ದರು ಎಂದರೆ ಸರಿ. ಸದರಿ ಸುನಾವಣೆಯಲ್ಲಿ ಅರ್ಜಿದಾರರು ಜೂನ್ -2016 ರಿಂದ ವಂತಿಗೆಯನ್ನು ಹೊಸ ಇ ಎಸ್ ಐ ಕೋಡಿನಡಿಯಲ್ಲಿ ನೀಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ ಎಂದರೆ ಸರಿ. ಅರ್ಜಿದಾರರು ಸುನಾವಣೆಯಲ್ಲಿ ಹಳೆಯ ಕೋಡ್ ಅವರಿಗೆ ಗೊತ್ತಿಲ್ಲದೇ ಇದ್ದುದರಿಂದ ವಂತಿಗೆಯನ್ನು ಹೊಸ ಕೋಡಿನಲ್ಲಿ ಮುಂದುವರಿಸುತ್ತಿದ್ದೇನೆ ಎಂದು ಹೇಳಿ ಹಳೆ ಅವಧಿಗೆ ವಂತಿಗೆಯನ್ನು ನೀಡುವಂತೆ ಕಾಲಾವಕಾಶವನ್ನು ಕೋರಿರುತ್ತಾರೆ ಎಂದರೆ ಸರಿ. 2019 ರಲ್ಲಿ ಅರ್ಜಿದಾರರು 2011 ರಿಂದ 2016 ರವರೆಗೆಗಿನ ವಂತಿಗೆ ಮತ್ತು ಬಡ್ಡಿಯನ್ನು ನೀಡದೇ ಇದ್ದ ಕಾರಣ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ಸಂಖ್ಯೆಃ 853/2019 ರಂತೆ ನಿಶಾನೆ ಆರ್-8 ರಂತೆ ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣ ಬಾಕಿ ಇರಬೇಕಾದರೆ ಅರ್ಜಿದಾರರು 2011 ರಿಂದ 2016 ರವರೆಗಿನ ವಂತಿಗೆ ಮತ್ತು ಬಡ್ಡಿ ಯನ್ನು ನೀಡಿದ ಮೇರೆಗೆ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣ ದಾಖಲಾದ ಕಾಲಕ್ಕೆ ಹಾಗೂ ಅರ್ಜಿದಾರರು ವಂತಿಗೆ ಮತ್ತು ಬಡ್ಡಿಯನ್ನು ಕಟ್ಟಿದ ಸಮಯಕ್ಕೆ ಡ್ಯಾಮೇಜಸ್ ಬಗ್ಗೆ ಯಾವುದೇ ನೋಟೀಸನ್ನು ಅರ್ಜಿದಾರರಿಗೆ ನೀಡಲಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಂತಿಗೆ ಮತ್ತು ಬಡ್ಡಿಯನ್ನು ನೀಡದೆ ಡ್ಯಾಮೇಜಸ್ ಬಗ್ಗೆ ಯಾವುದೇ ನೋಟೀಸನ್ನು ನೀಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಹಳೇ ಕೋಡ್ ನಂಬರ್ ವ್ಯತ್ಯಾಸದಿಂದಾಗಿ ಹಾಗೂ ಕ್ರಿಮಿನಲ್ ಪ್ರಕರಣ ಬಾಕಿ ಇದ್ದ ಕಾರಣ ವಂತಿಗೆ ಮತ್ತು ಬಡ್ಡಿಯನ್ನು ನೀಡಲು ತಡವಾಗಿರುತ್ತದೆ ಎಂದರೆ ಸರಿಯಲ್ಲ. ಜೂನ್-2016 ರಿಂದ ಮಾರ್ಚ 2018 ರವರೆಗೆ ವಂತಿಗೆ ಯನ್ನು ಹೊಸ ಕೋಡಿನಡಿಯಲ್ಲಿ ಪಾವತಿ ಮಾಡಿದ್ದರಿಂದ ಸದರಿ ಪ್ರಕರಣವನ್ನು ಯಾವುದೇ ವಂತಿಗೆಯನ್ನು ಅರ್ಜಿದಾರರು ಕಟ್ಟುವಂತಿಲ್ಲ ಎಂದು ಮುಕ್ತಾಯಗೊಳಿಸಲಾಗಿರುತ್ತದೆ ಎಂದು ನಿಶಾನೆ ಆರ್-5 ರಂತೆ ಆದೇಶವನ್ನು ಮಾಡಲಾಗಿರುತ್ತದೆ

ESI.A.No.43/2021
RW-1,

ಎಂದರೆ ಸರಿ. ಡ್ಯಾಮೇಜಸನ್ನು ನೀಡುವಂತೆ ಕೋರಿದ್ದ ನೋಟೀಸಿನ ಸುನಾವಣೆಗೆ ಅರ್ಜಿದಾರರು ಹಾಜರಾಗಿ ಹಳೇ ಕೋಡ್ ನಂಬರ್ ವ್ಯತ್ಯಾಸದಿಂದಾಗಿ ಹಾಗೂ ಕ್ರಿಮಿನಲ್ ಪ್ರಕರಣ ಬಾಕಿ ಇದ್ದ ಕಾರಣ ವಂತಿಗೆ ಮತ್ತು ಬಡ್ಡಿಯನ್ನು ನೀಡಲು ತಡವಾಗಿರುತ್ತದೆ ಎಂದು ಹೇಳಿ ಡ್ಯಾಮೇಜಸನ್ನು ಮನ್ನಾ ಮಾಡಬೇಕೆಂದು ಕೋರಿರುತ್ತಾರೆ ಎಂದರೆ ಸರಿ. ಆದುದರಿಂದ ಅರ್ಜಿದಾರರು ಯಾವುದೇ ಡ್ಯಾಮೇಜಸನ್ನು ನೀಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್.ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.